# ಸುದ್ದಿ ಸಂಚಯ

## ಬಿಜಾಪುರದಲ್ಲಿ ಭಕ್ತ ಸಮ್ಮೇಳನ

ಮೂರನೆಯ ಅಖಿಲ ಕರ್ನಾಟಕ ರಾಮಕೃಷ್ಣ ಭಕ್ತ ಸಮ್ಮೇಳನವನ್ನು ೨೦೦೩ ಫೆಬ್ರುವರಿ ೨೩ರಿಂದ ೨೬ರವರೆಗೆ ಇಲ್ಲಿಯ ಖಾಸಗಿ ಸಂಸ್ಥೆಯಾದ ರಾಮಕೃಷ್ಣ-ವಿವೇಕಾನಂದ ಆಶ್ರಮದ ವತಿಯಿಂದ ನಡೆಸಲಾಯಿತು. ಸುಮಾರು ೨೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಸಾಧುಗಳೂ ಸೇರಿದಂತೆ ೩೦ ಜನ ಸಾಧುಗಳು ಭಾಗವಹಿಸಿದ್ದರು. ಸಮ್ಮೇಳನವು ಅತ್ಯಂತ ಯಶಸ್ವಿಯಾಗಿದ್ದು ಶ್ರೀರಾಮಕೃಷ್ಣ ಭಾವ ಪ್ರಚಾರದಲ್ಲಿ ಗಣನೀಯ ಪಾತ್ರ ವಹಿಸಿತೆಂದು ಹೇಳಬಹುದು.

೨೩ರಂದು ಮಧ್ಯಾಹ್ನ ೩.೩೦ಕ್ಕೆ ಸಮ್ಮೇಳನದ ಉದ್ಘಾಟನೆ. ದಿವ್ಯಸಾನ್ನಿಧ್ಯ ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್. ಅಧ್ಯಕ್ಷತೆ ವಹಿಸಿದವರು ಸದ್ಗುರು ಶ್ರೀಗಣಪತಿರಾವ್ ಮಹಾರಾಜ್ ಅವರು. ಕರ್ನಾಟಕದ ಸನ್ಮಾನ್ಯ ಮಂತ್ರಿಗಳಾದ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿದರು. ಅಂದು ಸಂಜೆ ೭.೦೦ ರಿಂದ ೮.೧೫ರವರೆಗೆ ಸೋದರಿ ಆರತಿ ಮತ್ತು ತಂಡದವರಿಂದ ಭಕ್ತಿಸಂಗೀತ.

೨೪ರಂದು ಶ್ರೀರಾಮಕೃಷ್ಣ ಚಿಂತನಧಾರೆಗೆ ಸಂಬಂಧಿಸಿದ ಪ್ರಥಮ ಗೋಷ್ಠಿಯಲ್ಲಿ ಬಿಜಾಪುರದ ಶ್ರೀ ಮಧ್ವಾಚಾರ್ಯ ಮೊಕಾಶಿಯವರೂ ಶಿವಮೊಗ್ಗದ ಡಾ. ಎ.ಎಸ್. ವೇಣು ಗೋಪಾಲರಾವ್ ಅವರೂ ಮಾತನಾಡಿದರು. ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಜಗದಾತ್ಮಾ ನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ದ್ವಿತೀಯ ಗೋಷ್ಠಿ ಯಲ್ಲಿ ಬೆಂಗಳೂರಿನ ಶ್ರೀ ಹೆಚ್.ಎನ್. ಮುರಳೀಧರ ಅವರೂ ಮೈಸೂರಿನ ಸ್ವಾಮಿ ನಿತ್ಯಸ್ಥಾನಂದರೂ ಮಲ್ಯಂಕರಣೆಯ ಸ್ವಾಮಿ ಪ್ರಮಥೇಶಾನಂದಜಿಯವರೂ ಮಾತನಾಡಿದರು. ಅಧ್ಯಕ್ಷತೆ ಸ್ವಾಮಿ ಗೌತಮಾನಂದಜಿಯವರದು. ಮಧ್ಯಾಹ್ನ ೨.೦೦ ರಿಂದ ೩.೧೫ ರವರೆಗೆ ಆರ್. ಎನ್. ಕೆ. ಮಿತ್ರ ಮಂಡಳಿಯಿಂದ "ಸಂತ ದಾಮೋಜಿಪಂತ್" ನಾಟಕ. ತೃತೀಯ ಗೋಷ್ಠಿಯ ಅಧ್ಯಕ್ಷತೆ ಯನ್ನು ಚೆನ್ನೈ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮಿನ ಕಾರ್ಯದರ್ಶಿ ಗಳಾದ ಸ್ವಾಮಿ ವೀತಭಯಾನಂದಜಿಯವರು ವಹಿಸಿದ್ದರು. ಈ ಗೋಷ್ಠಿಯಲ್ಲಿ ಮಾತನಾಡಿದವರು ಬಿಜಾಪುರದ ಶ್ರೀ ಜಯದೇವ ಜಗದ್ಗುರುಗಳು, ಶ್ರೀ ಅಭಿನವ ಶಿವಪುತ್ರ ಮಾಹಾಸ್ವಾಮಿಗಳು, ಬಿದರಕುಂದಿಯ ಶ್ರೀಶಿವಕುಮಾರ ಮಹಾಸ್ವಾಮಿಗಳು ಮತ್ತು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥ ರಾದ ಶ್ರೀವಿರೇಶಾನಂದ ಸರಸ್ವತಿ ಮಹಾಸ್ವಾಮಿಗಳು. ಅಂದು ಸಂಜೆ ೬.೦೦ರಿಂದ ೬.೩೦ರವರೆಗೆ ಶ್ರೀಮತಿ ಶಶಿಕಲಾ ಕುಲ್ಲೋಳಿ ಯವರಿಂದ ಸುಶ್ರಾವ್ಯ ಸಂಗೀತ ಕಾರ್ಯಕ್ರಮವಿತ್ತು ಮತ್ತು ೭.೦೦ರಿಂದ ೮.೩೦ರವರೆಗೆ ಶ್ರೀ ಭದ್ರಗಿರಿ ಅಚ್ಯುತದಾಸರಿಂದ ಹರಿಕಥೆ.

೨೫ರಂದು ಶ್ರೀಶಾರದಾ ಚಿಂತನಧಾರೆಯ ಪ್ರಥಮ ಗೋಷ್ಠಿ ಯಲ್ಲಿ ಮಾತನಾಡಿದವರು ಶ್ರೀಮತಿ ಜಯಲಕ್ಷ್ಮೀ ಮಂಗಳ ಮೂರ್ತಿ ಮತ್ತು ಸೋದರಿ ಆರತಿ. ಅಧ್ಯಕ್ಷತೆ ಶ್ರೀಮತಿ ಪ್ರೇಮಕ್ಕ ಹೊರಟ್ಟಿಯವರದು. ಅಂದು ನಡೆದ ಜೀವಂತ ದುರ್ಗಾಪೂಜೆಯನ್ನು ಉದ್ಘಾಟಿಸಿ 'ವಿವೇಕಸಂಗಮ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದವರು ಮಾನ್ಯ ರಾಜ್ಯಪಾಲರಾದ ಶ್ರೀ ಟಿ.ಎನ್. ಚತು ರ್ವೇದಿಯವರು. ಅಂದಿನ ದ್ವಿತೀಯ ಗೋಷ್ಠಿಯಲ್ಲಿ ಮಾತ ನಾಡಿ ದವರು ಸ್ವಾಮಿ ಜಗದಾತ್ಮಾನಂದಜಿ ಮತ್ತು ಶ್ರೀ ವೇಣುಗೋಪಾಲ ರಾವ್ ಅವರು. ಅಧ್ಯಕ್ಷತೆ ಸ್ವಾಮಿ ಗೌತಮಾನಂದಜಿಯವರದು. ಅಂದು ಮಧ್ಯಾಹ್ನ ೨ರಿಂದ ೩.೩೦ರವರೆಗೆ ಕುಮಾರಿ ಶಕ್ತಿ ಪಾಟೀಲ್ ಮತ್ತು ಲತಾ ಜಹಗೀರ್‌ದಾರ್ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮವೂ ಮನಗೋಳಿ ವಿವೇಕಾನಂದ ರೂರಲ್ ಅಕಾಡೆಮಿ ವಿದ್ಯಾರ್ಥಿಗಳಿಂದ ಕೋಲಾಟ ಮತ್ತು ನೃತ್ಯ ಕಾರ್ಯ ಕ್ರಮವೂ ಇದ್ದವು. ಅದೇ ದಿನ ವಿವೇಕಚಿಂತನ ಧಾರೆಯ ಪ್ರಥಮ ಗೋಷ್ಠಿಯಲ್ಲಿ ಶ್ರೀ ಹೆಚ್.ಎನ್. ಮುರಳೀಧರ್ ಮತ್ತು ಸ್ವಾಮಿ ಜಗದಾತ್ಮಾನಂದಜಿ ಮಾತನಾಡಿದರು. ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಅಧ್ಯಕ್ಷತೆ ವಹಿಸಿದ್ದರು. ಸಂಜೆ ೬.೦೦ರಿಂದ ವಿದ್ವಾನ್ ಗುರುರಾಜ್ ಅವರಿಂದ ಭಕ್ತಿ ಗೀತೆ. ೭.೦೦ರಿಂದ ಧಾರವಾಡದ ಶಾರದಾ ಆಧ್ಯಾತ್ಮಿಕ ಸಂಘದವರಿಂದ ಶ್ರೀಮಾತೆ ಶಾರದಾದೇವಿಯವರ ಮೇಲೆ ಹೃದಯಂಗಮ ನಾಟಕ. ವಿವೇಕಚಿಂತನಧಾರೆಯ ದ್ವಿತೀಯ ಗೋಷ್ಠಿಯಲ್ಲಿ ಮಾತನಾಡಿದವರು ಕುಮಾರಿ ತೇಜಸ್ವಿನಿ, ಶ್ರೀ ಎ.ಎಸ್.ವೇಣುಗೋಪಾಲ ರಾವ್ ಮತ್ತು ಬಿಜಾಪುರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾ ನಂದಜಿಯವರು. ಅಧ್ಯಕ್ಷತೆ ವಿವೇಕಪ್ರಭ ಪತ್ರಿಕೆಯ ಸಂಪಾ ದಕರಾದ ಸ್ವಾಮಿ ನಿತ್ಯಸ್ಥಾನಂದಜಿಯವರದು.

೨೬ರಂದು ಸಮಾರೋಪ ಸಮಾರಂಭದಲ್ಲಿ ಇಡೀ ಸಮ್ಮೇ ಳನದ ಕಳಶಪ್ರಾಯವಾಗಿ ಶ್ರೀಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಉಪನ್ಯಾಸವಿತ್ತು. ಸ್ವಾಮಿ ಗೌತಮಾನಂದಜಿಯವರು ಆಶೀರ್ವಚನ ವನ್ನು ನೀಡುತ್ತ ಭಕ್ತಸಮ್ಮೇಳನಗಳ ಮಹತ್ವವನ್ನೂ ಆವಶ್ಯಕತೆ ಯನ್ನೂ ವಿವರಿಸಿದರು, ಮತ್ತು ಶ್ರೀರಾಮಕೃಷ್ಣರ ಬಗ್ಗೆ ಮನ ಮುಟ್ಟುವಂತೆ ಮಾತನಾಡಿದರು.

ಈ ಕಾರ್ಯಕ್ರಮಗಳಲ್ಲದೆ ಪ್ರತಿದಿನ ಬೆಳಿಗ್ಗೆ ಯತಿವೃಂದದಿಂದ ಉಪಾಕೀರ್ತನೆ ಮತ್ತು ಸ್ವಾಮಿ ಆತ್ಮವಿದಾನಂದಜೀಯವರಿಂದ ಧ್ಯಾನತರಗತಿಗಳು ಇರುತ್ತಿದ್ದವು. ಇವಿಷ್ಟೇ ಅಲ್ಲದೆ ಬೆಳಗಾಂ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿಯವರು ಪ್ರತಿದಿನವೂ ತಮ್ಮ ಮಧುರ ಗಾಯನದಿಂದ ಎಲ್ಲರನ್ನೂ ರಂಜಿಸಿದರು.